ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 04-07-1971

***ಸ್ಮೃತಿಯ(ನೆನಪಿನ) ಸಹಜ ವಿಧಿ*** (याद की सहज विधि)

ಇಲ್ಲಿ ಕುಳಿತಿರುವವರೆಲ್ಲಾ ಯಾವ ಸ್ಟೇಜ್ ನ ಸ್ಥಿತಿಯಲ್ಲಿದ್ದೀರಿ? ಈ ಸಮಯದ ತಮ್ಮ ಸ್ಮೃತಿಯ ಸ್ಟೇಜ್ ಯಾವುದೆಂದು ಹೇಳಬಹುದು? ಈ ಸ್ಥಿತಿಯಲ್ಲಿ ಡಬಲ್ ನೆನಪಿದೆಯೋ ಅಥವಾ ಸಿಂಗಲ್ (ಒಬ್ಬನದೋ) ಸ್ಮೃತಿಯಿದೆಯೋ? ಈ ಸಮಯದ ಸ್ಟೇಜ್ ಕರ್ಮಾತೀತ ಅಥವಾ ಫರಿಶ್ತಾನ ಸ್ಮೃತಿಯ ಸ್ಟೇಜ್ ಎಂದು ಹೇಳಬಹುದೇ? ಅವ್ಯಕ್ತ ಸ್ಥಿತಿಯನ್ನು ಬಿಟ್ಟು ಬೇರೆ ಯಾವುದಾದರೂ ಸ್ಥಿತಿ ಎಂದು ಹೇಳುವವರು ಕೈಎತ್ತಿ. ಇಡೀ ದಿನದಲ್ಲಿ ಈ ರೀತಿ ಅವ್ಯಕ್ತ ಸ್ಥಿತಿಯಲ್ಲಿದ್ದು ಕರ್ಮ ಮಾಡಬಲ್ಲಿರಾ? (ಇಲ್ಲ). ಈಗ ಏನನ್ನು ಬರೆಯುತ್ತಿರುವಿರೋ ಇದೂ ಸಹ ಕರ್ಮವೇ ಆಗಿದೆ. ಈಗ ಕರ್ಮ ಮಾಡುತ್ತಲೇ ಇಂತಹ ಸ್ಟೇಜ್ ಇರಲಾರದೇ? (ಈಗ ತಂದೆಯ ಸಮ್ಮುಖದಲ್ಲಿ ಕುಳಿತುಕೊಂಡಿರುವೆವು), ತಂದೆ ನಮ್ಮ ಜೊತೆಗಿದ್ದಾರೆ, ಸಮ್ಮುಖದಲ್ಲಿದ್ದಾರೆ ಎಂದು ಸದಾ ತಿಳಿದರೆ ಹೇಗಿರುತ್ತದೆ? ಆ ಜನ ಇಂತಹ ವಾಯುಮಂಡಲದಲ್ಲಿ ವಿಶೇಷ ಗಮನವಿಟ್ಟುಕೊಂಡು ಹೋಗುತ್ತಾರೆ. ಆದ್ದರಿಂದ ಈ ಗಮನವೇ ಅವರ ಸುರಕ್ಷೆಯ ಸಾಧನವಾಗುತ್ತದೆ. ಅದೇ ರೀತಿ ಯಾವುದೇ ಸಾಧಾರಣ ಕರ್ಮ ಮಾಡುತ್ತಿದ್ದರೂ ಮಧ್ಯದಲ್ಲಿ ಅವ್ಯಕ್ತ ಸ್ಥಿತಿಯನ್ನು ಮಾಡಿಕೊಳ್ಳುವ ಗಮನವಿದ್ದರೆ ಮತ್ತು ಯಾವುದೇ ಕಾರ್ಯ ಮಾಡುವಾಗ ಸದಾ ಬಾಪ್ ದಾದಾರನ್ನು ತಮ್ಮ ಜೊತೆಗಾರ ಎಂದು ತಿಳಿದು ಡಬಲ್ ಬಲದಿಂದ ಕಾರ್ಯ ಮಾಡಿದಾಗ ಯಾವ ಸ್ಟೇಜ್ ಇರುವುದು ಹೇಳಿ? ಸಹಜ ಸ್ಥಿತಿಯಿರುವುದು. ಹೇಗೆ ಈಗ ಸಮ್ಮುಖದಲ್ಲಿದ್ದೇನೆ ಎಂದು ತಿಳಿಯುವುದರಿಂದ ಸಹಜ ನೆನಪಿದೆಯಲ್ಲವೇ? ಒಂದು ವೇಳೆ ಈ ರೀತಿ ಸದಾ ಪ್ರತಿಯೊಂದು ಕರ್ಮವನ್ನು ತಂದೆಯನ್ನು ತನ್ನ ಜೊತೆಗಾರ ಎಂದು ತಿಳಿದು ನಡೆದರೆ ಇದು ಸಹಜ ನೆನಪಲ್ಲವೇ? ಸದಾ ಯಾರಾದರೂ ನೆನಪಿದ್ದರೆ, ಆ ಜೊತೆಯ ಕಾರಣ ತಂದೆಯ ಸ್ಮೃತಿ ಸ್ವತಃ ಇರುತ್ತದೆಯಲ್ಲದೇ? ಇಂತಹ ಜೊತೆಗಾರನಿದ್ದರೆ ಅಥವಾ ಬುದ್ಧಿ ನಿರಂತರ ಸತ್ಯನ ಸಂಗ ಮಾಡಿದರೆ ನಿರಂತರ ಸತ್ಸಂಗವಾಗುವುದು. ತಾವು ಸತ್ಸಂಗಿಗಳಾಗಿದ್ದೀರಿ, ಪ್ರತಿ ಕ್ಷಣ, ಪ್ರತಿ ಹೆಜ್ಜೆಯಲ್ಲಿ ಸತ್ಯನ ಸಂಗವಿದೆಯಲ್ಲವೇ? ನಿರಂತರ ತಮ್ಮನ್ನು ಸತ್ಸಂಗಿಯನ್ನಾಗಿ ಮಾಡಿಕೊಂಡರೆ ನೆನಪು ಸಹಜವಾಗಿರುವುದು ಮತ್ತು ಶಕ್ತಿಶಾಲಿ ಸಂಗವಿರುವ ಕಾರಣ ಪ್ರತಿಯೊಂದು ಕರ್ತವ್ಯದಲ್ಲಿ ಡಬಲ್ ಬಲ ತಮಗಿರುವುದು. ಡಬಲ್ ಬಲವಿರುವ ಕಾರಣ ಯಾವ ಕಾರ್ಯವನ್ನು ಸ್ಥಿತಿಗನುಸಾರ ಕಠಿಣ ಎಂದು ತಿಳಿಯುತ್ತೀರೋ ಅದು ಸಹಜವಾಗುವುದು. ಏಕೆಂದರೆ ಡಬಲ್ ಬಲವಿದೆ. ಮತ್ತು ಅದೇ ಸಮಯದಲ್ಲಿ ಒಂದು ಕರ್ತವ್ಯದ ಬದಲಾಗಿ ಡಬಲ್ ಕಾರ್ಯ ಸಮಾಪ್ತಿ ಮಾಡಬಹುದು. ಒಂದು ಸಹಜ ನೆನಪು, ಎರಡನೆಯದು ಸಫಲತೆ, ಮೂರನೆಯದು ಸರ್ವ ಕರ್ಮದಲ್ಲಿ ಉತ್ಸಾಹ ಉಲ್ಲಾಸ ಮತ್ತು ಸಹಯೋಗದ ಪ್ರಾಪ್ತಿಯಾಗುವದು. ಆದ್ದರಿಂದ ನಿರಂತರ ಸಂತ್ಸಂಗಿಯಾಗಿ, ತಮ್ಮ ಬಳಿ ಯಾರಾದರೂ ಬಂದರೆ ಸದಾ ಸತ್ಸಂಗದಲ್ಲಿರಿ ಎಂದು ನಿಯಮ ಹೇಳುತ್ತೀರಿ. ಹಾಗಾದರೆ ಈ ಅಭ್ಯಾಸವನ್ನು ತಾವೂ ಸಹ ನಿರಂತರ ಮಾಡಬೇಕು. ಆಗ ಕಠಿಣವೆನಿಸುವ ನೆನಪು, ಹೇಗೆ ನೆನಪು ಉಳಿಯುವುದು, ಎಲ್ಲಿ ನಿಲ್ಲಿಸುವುದು ಎಂದು ಯೋಚಿಸುತ್ತೀರಿ, ಆಗ ಅದೆಲ್ಲವೂ ಸಮಾಪ್ತಿಯಾಗುವುದು. ಕರ್ಮದ ಸಹಜ ಸಿದ್ಧಿಯಾಗುವುದು. ಇದರಲ್ಲಿ ಬೇಕಾದರೆ ನಿರಾಕಾರ ರೂಪದ ಸಂಗ ಮಾಡಿ, ಬೇಕಾದರೆ ಸಾಕಾರ ರೂಪದಲ್ಲಿ ಸಂಗ ಮಾಡಿ ಆದರೆ ಸತ್ಸಂಗವಿರಲಿ. ಸಾಕಾರನ ಸಂಬಂಧವೂ ಇಡೀ ಕಲ್ಪದಲ್ಲಿ ಅವಿನಾಶಿಯಾಗಿರುವುದಲ್ಲವೇ? ಹಾಗಾದರೆ ಸಾಕಾರಿ ಸ್ಮೃತಿಯಿರಲಿ ಅಥವಾ ನಿರಾಕಾರಿ ಸ್ಮೃತಿಯಿರಲಿ, ಆದರೆ ಸ್ಮೃತಿ ಅವಶ್ಯವಾಗಿರಬೇಕು. ಬಾಪ್ ದಾದಾರ ಸಂಗದ ಹೊರತು ಇನ್ನಾವ ಸಂಗವೂ ಬುದ್ಧಿಯಲ್ಲಿರಬಾರದು. ಫರಿಶ್ತಾ ಆಗಲು ತಂದೆಯ ಜೊತೆಗೆ ಸಂಬಂಧ ಪಕ್ಕಾ ಆಗಿರಬೇಕು. ತಮ್ಮ ಸಂಬಂಧ ಪಕ್ಕಾ ಇದ್ದರೆ ಫರಿಶ್ತಾ ಆಗುವಿರಿ. ಈಗ ಕೇವಲ ಈ ತಮ್ಮ ಸಂಬಂಧವನ್ನು ಸರಿಯಾಗಿಟ್ಟುಕೊಳ್ಳಿ. ಒಬ್ಬನ ಜೊತೆಗೆ ಎಲ್ಲಾ ಸಂಬಂಧಗಳು ಇದ್ದಾಗ ಸಹಜ ಮತ್ತು ಸದಾ ಫರಿಶ್ತೆಯಾಗಿರುವಿರಿ. ಬುದ್ಧಿಗೆ ಹೋಗಲು ಇನ್ನೇನಿದೆ? ಇನ್ನೂ ಏನಾದರೂ ಇದೆಯಾ? ಎಲ್ಲಾ ಸಂಬಂಧಗಳು ಅಥವಾ ಎಲ್ಲಾ ದಾರಿಗಳು ಮುಚ್ಚಿವೆಯಲ್ಲವೇ? ದಾರಿ ತೆಗೆದಿದ್ದರೆ, ಬುದ್ಧಿ ಓಡುವುದು, ಎಲ್ಲಾ ಸಂಬಂಧಗಳು, ಎಲ್ಲ ದಾರಿಗಳು ಮುಚ್ಚಿದಾಗ ಬುದ್ಧಿ ಎಲ್ಲಿ

ಹೋಗುವುದು? ಒಂದೇ ದಾರಿ, ಒಂದೇ ಸಂಬಂಧವಿದ್ದಾಗ ಫರಿಶ್ತಾ ಆಗುವಿರಿ. ಯಾವ ದಾರಿ ಅಥವಾ ಯಾವ ಸಂಬಂಧ ಇನ್ನೂ ಪೂರ್ಣ ಮುಚ್ಚಿಲ್ಲ ಎಂದು ಪರಿಶೀಲನೆ ಮಾಡಿಕೊಳ್ಳಿ. ಸ್ವಲ್ಪ ತೆರೆದಿದ್ದರೂ ಪ್ರಜೆಗಳು(ಕರ್ಮೇಂದ್ರಿಯಗಳು) ಅಲ್ಲಿಂದ ಹೋಗಲು ಪ್ರಯತ್ನ ಮಾಡುತ್ತಾರೆ. ಪೂರ್ಣ ಬಂದಾಗಿದ್ದಾರೆ. ಹೋಗುವುದೇ ಇಲ್ಲ.

ರಂಧ್ರವಿದ್ದರೂ ಅದನ್ನು ಸ್ಪರ್ಶಿಸಿ ಹೋಗುತ್ತಾರೆ. ಇಲ್ಲಿಯೂ ಸಹ ಸ್ವಲ್ಪ ದಾರಿ ತೆರೆದಿದ್ದರೂ ಬುದ್ಧಿ ಹೋಗುತ್ತದೆ. ಈಗ ಹೇಗೆ ಮುಚ್ಚುವಿರಿ? ಎಲ್ಲಾ ದಾರಿಗಳನ್ನು ಮುಚ್ಚಲು ಸಹಜ ಯುಕ್ತಿ ಬಾರಿಬಾರಿ ಹೇಳುತ್ತಿರುತ್ತೇವೆ. ದಿನವೂ ಮುರಳಿಯಲ್ಲಿಯೂ ಕೇಳುತ್ತಿರುತ್ತೀರಿ, ನೆನಪಿದೆಯಾ? ವಿಸ್ಮೃತಿಗೆ ಸ್ಮೃತಿ ಕೊಡುವ ಯಾವ ಯುಕ್ತಿಯಿದೆ? ಬಾಪ್ ದಾದಾ ಮತ್ತು ವಾರಸತ್ವವೂ ಬರುವಂತಹ ಒಂದೇ ಚಿತ್ರವಿದೆ. ಈ ಚಿತ್ರ ಸದಾ ಸಮ್ಮುಖದಲ್ಲಿದ್ದರೆ ಇನ್ನುಳಿದ ದಾರಿಗಳು ಮುಚ್ಚುವವೇ? ಯಾವುದೇ ಚಿತ್ರ ಅಥವಾ ಪುಸ್ತಕಗಳ ಮುದ್ರಣವಾಗುವಾಗ ಇದೆ ಬ್ಲಾಕ್ ಹಾಕುತ್ತೀರಲ್ಲವೇ? ಇದೊಂದು ಬ್ಲಾಕ್ ಬುದ್ಧಿಯಲ್ಲಿ ಹಾಕಲ್ಪಟ್ಟರೆ ಎಲ್ಲಾ ದಾರಿಗಳು ಮುಚ್ಚುವುದಿಲ್ಲವೇ? ಇದು ಸಹಜ ಯುಕ್ತಿಯಾಗಿದೆ. ಮತ್ತು ಇನ್ನೊಂದು ಚಿತ್ರವನ್ನೂ ಕೊಡಲಾಗಿದೆ. ಇದನ್ನು ದಿನವೂ ಮುರಳಿಯಲ್ಲಿ ಕೇಳುತ್ತೀರಿ. ಈ ಯುಕ್ತಿಯಿಲ್ಲದಿರುವಂತಹ ಯಾವುದೇ ಮುರಳಿಯಿಲ್ಲ. ಇದು ಬಹಳ ಸಹಜವಾಗಿದೆ. ಚಿಕ್ಕ ಮಕ್ಕಳಿಗೂ ಈ ಚಿತ್ರವನ್ನು ಸದಾ ಸ್ಮೃತಿಯಲ್ಲಿ ಇಟ್ಟುಕೊಳ್ಳಿ ಎಂದು ಹೇಳಿದರೆ ಅವರೂ ಇಟ್ಟುಕೊಳ್ಳುವರು. ಬ್ಯಾಡ್ಜ್ ಹಾಕಿಕೊಳ್ಳುತ್ತೀರಿ ಆದರೆ ಬುದ್ಧಿಯಲ್ಲಿ ಸ್ಮೃತಿ ಸ್ವರೂಪರಾಗಿ. ಈ ಒಂದೇ ಚಿತ್ರದ ಸ್ಮೃತಿಯಿಂದ ಎಲ್ಲಾ ಸ್ಮೃತಿಗಳೂ ಬರುವವು. ಎಲ್ಲಾ ಜ್ಞಾನದ ಸಾರವೂ ಈ ಒಂದು ಚಿತ್ರದಲ್ಲಿ ಸಮಾವೇಶಗೊಂಡಿದೆ. ರಚಯಿತ ಮತ್ತು ರಚನೆಯ ಜ್ಞಾನದಿಂದ ಈ ಪ್ರಾಪ್ತಿಯಾಗಿದೆ. ಎಷ್ಟು ಈ ಸಹಜ ಯುಕ್ತಿಗಳನ್ನು ಅಳವಡಿಸಿಕೊಳ್ಳುವಿರೋ ಅಷ್ಟು ಪರಿಶ್ರಮ ಸರಳವಾಗುವುದು. ಯಾವುದಕ್ಕೆ ನೆನಪು ಎನ್ನುವುದು, ಏನನ್ನು ನೆನಪು ಮಾಡುವುದು? ನೆನಪಾಗುತ್ತದೆಯೋ ಇಲ್ಲವೋ ಎಂದು ಗೊಂದಲ ಮಾಡಿಕೊಳ್ಳಬೇಡಿ. ನೆನಪು ಏನಾಗಿದೆ ಎಂದು ಗೊತ್ತಿದ್ದರೂ ತಮಗೆ ತಾವೇ ಗೊಂದಲ ಮಾಡಿಕೊಳ್ಳುತ್ತೀರಿ? ತಂದೆಯ ನೆನಪು ಅಥವಾ ತಂದೆಯ ಕರ್ಮದಿಂದ ತಂದೆಯ ನೆನಪು ಅಥವಾ ತಂದೆಯ ಗುಣಗಳಿಂದ ತಂದೆಯ ನೆನಪಿದ್ದರೆ ಅದು ನೆನಪೇ ಆಯಿತಲ್ಲವೇ? ರೂಪದ ನೆನಪಿರಲಿ, ಹೆಸರಿನ ಅಥವಾ ಗುಣದ ಅಥವಾ ಕರ್ತವ್ಯದ ನೆನಪೆಲ್ಲವೂ ಒಂದೇ ಆಯಿತಲ್ಲವೇ? ತಾವು ಅದನ್ನು ಕಠಿಣ ಮಾಡಿಕೊಳ್ಳುತ್ತೀರಿ. ನೆನಪಿನ ಕೋರ್ಸ್ ಕಷ್ಟ-ಕಠಿಣ ಎನ್ನುತ್ತಾ ಬಲ ಬರುವುದಿಲ್ಲ. ಕೋರ್ಸನಲ್ಲಿಯೇ ಉಳಿಯುತ್ತೀರಿ. ಇದನ್ನು ಸಹಜ ಮಾಡಿಕೊಳ್ಳಿ. ತಂದೆಯ ಹೊರತು ಏನಾದರೂ ಇದೆಯಾ? ಪ್ರಾಕ್ಟಿಕಲ್ ನಲ್ಲಿ ಸರ್ವಸ್ನೇಹಿ ತಂದೆ ಎಂದು ತಿಳಿದಾಗ ಮತ್ತೆ ಅವರನ್ನು ನೆನಪು ಮಾಡಲು ಯಾವುದಾದರೂ ಯೋಜನೆ ಮಾಡಲಾಗುತ್ತದೆಯೇ? ಸಹಜ ಮಾತನ್ನು ಯಾರಾದರೂ ಒಮ್ಮೊಮ್ಮೆ ಕಠಿಣ ಮಾಡುತ್ತಾರೆ ಮತ್ತು ಇನ್ನೂವರೆಗೂ ಅಲ್ಲಲ್ಲಿ ದಾರಿ ತೆರೆದಿರುವುದರಿಂದ ಬಾರಿಬಾರಿ ಬುದ್ಧಿಗೆ ಪರಿಶ್ರಮ ಪಟ್ಟು ವಾಪಸ್ಸಾಗಬೇಕಾಗುತ್ತದೆ. ಇದರಲ್ಲಿ ದಣಿಯುತ್ತೀರಿ. ತಲೆ ಭಾರವಾಗುತ್ತದೆ. ಕಷ್ಟವೆಂದು ತಿಳಿದು ಕಷ್ಟದಲ್ಲಿ ಸಿಕ್ಕಿ ಹಾಕಿಕೊಳ್ಳುತ್ತೀರಿ. ಸಹಜ ವಿಧಿಯಾಗಿದೆ ಮೊದಲು ಈ ಎಲ್ಲಾ ದಾರಿಗಳನ್ನು ಮುಚ್ಚುವುದು. ಹೇಗೆ ಇದನ್ನು ಮುಚ್ಚಿ ಎಂದು ಸರಕಾರವು ಘೋಷಿಸಿದಾಗ ಮೊದಲು ಎಲ್ಲಾ ದಾರಿಗಳನ್ನು ಮುಚ್ಚಿ ಎಂಬ ಬಾಪ್ ದಾದಾರ ಆದೇಶ ತಮಗಿದೆ. ನಂತರ ಕಷ್ಟ ದೂರವಾಗಿ ಎಲ್ಲವೂ ಸಹಜವಾಗುವುದು. ಆಮೇಲೆ ಸ್ವಾಭಾವಿಕವಾಗುವುದು. ಇದನ್ನು ಗಮನದಲ್ಲಿಟ್ಟುಕೊಳ್ಳುವುದು ಕಷ್ಟವೋ ಅಥವಾ ಸಹಜವೋ? ಕಷ್ಟವಿಲ್ಲ ಆದರೆ ಕಠಿಣ ಮಾಡಿಕೊಳ್ಳುತ್ತೀರಿ. ಸಮಯಾನುಸಾರ ಈ ಗಮನವಿದ್ದರೆ ಕಷ್ಟವಾಗುವುದಿಲ್ಲ. ಹುಡುಗಾಟಿಕೆಯಲ್ಲಿ ಬರುತ್ತಿರುತ್ತೀರಿ. ಆದ್ದರಿಂದ ಕಠಿಣವೆನಿಸುತ್ತದೆ. ಬಾಲ್ಯದಲ್ಲಿ ಕಲಿಸಿದ ಮಾತುಗಳ ಸಹಜ ಸ್ಥಿತಿಯಲ್ಲಿರುತ್ತವೆ. ಎಷ್ಟು ದೊಡ್ಡವರಾಗುತ್ತೆವೋ ಅಷ್ಟು ಯಾವುದೇ ಮಾತು ಸ್ಮೃತಿಯಲ್ಲಿ ತರುವುದು ಕಷ್ಟವಾಗುತ್ತದೆ. ಇದರಲ್ಲಿಯೂ ಯಾರು ಬಾಲ್ಯದಿಂದಲೇ ಇದನ್ನು ಗಮನದಲ್ಲಿಟ್ಟುಕೊಳ್ಳುವ ಅಭ್ಯಾಸ ಮಾಡಿರುವರೋ ಇಂದಿಗೂ ಸಹ ಅವರ ನೆನಪಿನ ಚಾರ್ಟ್ ಸಹಜವಾಗಿದೆ ಮತ್ತು ಯಾರೆಲ್ಲಾ ಈ ಮಾತಿನ ಕಡೆಗೆ ಆರಂಭದಿಂದಲೂ ಹುಡುಗಾಟಿಕೆಯಲ್ಲಿದ್ದಾರೋ ಅವರಿಗೆ ಈಗ ಕಠಿಣವೆನಿಸುತ್ತದೆ ಈಗ ಆಗಿ ಹೋದದ್ದು ಆಗಿ ಹೋಯಿತೆಂದು ತಿಳಿದು ನಾನು ಮಗುವಾಗಿದ್ದೇನೆ, ತಂದೆಯ ಜೊತೆಗಿದ್ದೇನೆ. ಹೀಗೆ ತಿಳಿಯುವುದರಿಂದ ಆ ಬಾಲ್ಯದ ಜೀವನ ಸ್ಮೃತಿಯಲ್ಲಿರುವುದು. ಎಷ್ಟು ಈ ಸ್ಮೃತಿಯಿರುವುದೋ ಅಷ್ಟು ಅದರಿಂದ ಸಹಯೋಗ ಸಿಗುವುದು. ಆಗ ಕಷ್ಟದ ಕೆಲಸ

ಸಹಜವಾಗುವುದು. ಈಗಿನಿಂದಲೇ ತಮ್ಮನ್ನು ತಂದೆಯಿಂದ ಬೇರೆ ಎಂದು ತಿಳಿಯಬೇಡಿ. ತಂದೆಯ ಜೊತೆಯಿದೆ ಮತ್ತು ತಂದೆಯ ಕೈಯಲ್ಲಿ ನನ್ನ ಕೈಯಿದೆ ಎಂದು ಸದಾ ತಿಳಿಯಿರಿ.

ಒಂದು ವೇಳೆ ದೊಡ್ಡವರ ಕೈಯಲ್ಲಿ ಕೈಯಿದ್ದರೆ ಚಿಕ್ಕವರ ಸ್ಥಿತಿ ನಿಶ್ಚಿಂತವಾಗಿರುತ್ತದೆ. ಪ್ರತಿಯೊಂದು ಕರ್ಮದಲ್ಲಿ ಬಾಪ್ ದಾದಾ ನನ್ನ ಜೊತೆಗೂ ಇದ್ದಾರೆ ಮತ್ತು ನಮ್ಮ ಈ ಅಲೌಕಿಕ ಜೀವನದ ಕೈ ಅವರ ಕೈಯಲ್ಲಿದೆ ಎಂದರೆ ಜೀವನವನ್ನು ಅವರಿಗೆ ಒಪ್ಪಿಸಿದ್ದೇವೆ. ಜವಾಬ್ದಾರಿ ಅವರದು ಎಂದು ತಿಳಿದು ಎಲ್ಲಾ ಭಾರವನ್ನು ತಂದೆಯ ಮೇಲಿಟ್ಟು ತಮ್ಮನ್ನು ಹಗುರ ಮಾಡಿಕೊಳ್ಳಬೇಕು. ಭಾರವೇ ಇಲ್ಲದಿದ್ದರೆ ಕಷ್ಟವೆನಿಸುವುದೇ? ತಂದೆಯ ಕೈ ಮತ್ತು ಜೊತೆ. ಭಾರವನ್ನು ಇಳಿಸುವ ಅಥವಾ ಕಠಿಣವಾದುದನ್ನು ಸಹಜ ಮಾಡುವ ಸಹಜ ಸಾಧನವಾಗಿದೆ - ಇದು ಸಹಜವಾಗಿದೆಯಲ್ಲವೇ? ಆಮೇಲೆ ಬಾಬಾ ಸ್ಮೃತಿಯಲ್ಲಿರಲಿ, ದಾದಾ ಸ್ಮೃತಿಯಲ್ಲಿರಲಿ. ತಂದೆಯ ಸ್ಮೃತಿ ಬಂದರೆ ಜೊತೆಗೆ ದಾದಾರದೂ ಬರುವುದು. ದಾದಾರ, ಸ್ಮತಿಯಿದ್ದರೆ ತಂದೆಯ ಸ್ಮೃತಿಯೂ ಇರುವುದು, ಬೇರೆಯಾಗಲು ಸಾಧ್ಯವಿಲ್ಲ. ಸಾಕಾರನ ಸ್ನೇಹಿಯಾದರೂ ಬೇರೆ ಎಲ್ಲಾ ಕಡೆಗಳಿಂದ ಬುದ್ಧಿಯ ಸಂಬಂಧ ಕತ್ತರಿಸುವುದಲ್ಲವೇ? ಸಾಕಾರನ ಸ್ನೇಹಿಯಾಗುವುದು ಕಡಿಮೆ ಮಾತೇನಲ್ಲ. ಸಾಕಾರ ಸ್ನೇಹವೂ ಸರ್ವ ಸ್ನೇಹದಿಂದ, ಸಂಬಂಧಗಳಿಂದ ಬುದ್ಧಿಯೋಗವನ್ನು ಕತ್ತರಿಸುವುದು. ಅನೇಕ ಕಡೆಗಳಿಂದ ಕತ್ತರಿಸಿ ಒಂದು ಕಡೆಗೆ ಜೋಡಿಸುವ ಸಾಧನವಾಗಿದೆಯಲ್ಲವೇ? ಸಾಕಾರನಿಂದ ನಿರಾಕಾರನ ಕಡೆಗೆ ನೆನಪು ಬರುವುದಲ್ಲವೇ? ತಂದೆ, ದಾದಾ ಜೊತೆಯಾದಾಗ ಸಾಕಾರಾನ ಜೊತೆಗೆ ಸ್ನೇಹ ಹುಟ್ಟಿತಲ್ಲವೇ? ತಂದೆ, ದಾದಾರ ಜೊತೆಯಿಲ್ಲದಿದ್ದರೆ ಸಾಕಾರ ಇಷ್ಟು ಪ್ರಿಯನಾಗುತ್ತಿದ್ದರೇ? ಹೇಗೆ ತಂದೆ, ದಾದಾ ಇಬ್ಬರೂ ಜೊತೆಗಿದ್ದಾರೋ ಹಾಗೆ ತಮ್ಮ ನೆನಪು ಸಹ ಜೊತೆಗಿರುವುದು. ಇದು ಕಠಿಣವೆಂದು ಎಂದೂ ತಿಳಿಯಬೇಡಿ. ಸಹಜ ಯೋಗಿಗಳಾಗಿ, ಕಠಿಣ ಯೋಗಿ ದ್ವಾಪರದಿಂದ ಆಗುತ್ತಲೇ ಇದ್ದೀರಿ. ಹಠ ಯೋಗಿಗಳನ್ನು ತಾವು ಖಂಡಿಸುತ್ತೀರಲ್ಲವೇ? ತಾವೂ ಸಹಜ ಯೋಗಿಗಳಾಗದಿದ್ದರೆ ಮತ್ತು ಕಠಿಣ ಎಂದು ಹೇಳಿದರೆ ಎರಡೂ ಒಂದೇ ಮಾತಾಯಿತಲ್ಲವೇ? ಸಹಜ ಯೋಗಿಗಳಾಗಬೇಕು. ಯಥಾರ್ಥ ನೆನಪಾಗಿದೆ ನಿರಂತರ ಸಹಜ ಯೋಗಿಯಾಗುವುದು. ಕೇವಲ ತಮ್ಮ ಸ್ಥಿತಿಯನ್ನು ಮಧ್ಯ-ಮಧ್ಯದಲ್ಲಿ ಶಕ್ತಿಶಾಲಿ ಮಾಡುತ್ತಿರಿ. ಸ್ಟೇಜ್ ಮೇಲೆ ಇರುವಿರಿ, ಕೇವಲ ಸಮಯಾನುಸಾರ ಈ ನೆನಪಿನ ಸ್ಥಿತಿಯನ್ನು ಶಕ್ತಿಶಾಲಿ ಮಾಡಲು ಗಮನ ಕೊಡುವ ಶಕ್ತಿಯನ್ನು ತುಂಬುತ್ತೀರಿ. ಇಳಿಯುವ ಕಲೆ ಈಗ ಸಮಾಪ್ತಿಯಾಯಿತಲ್ಲವೇ? ಅಥವಾ ಈಗಲೂ ಇದೆಯೋ? ಆಗಲೇ ಏರುವ ಕಲೆಯಲ್ಲಿ ಬಂದಿರುವಿರಲ್ಲವೇ?

ಒಂದು ದಿನದ ದಿನಚರಿಯನ್ನು ಯೋಚಿಸಿ-ಸಾಕಾರಿ ಅಥವಾ ನಿರಾಕಾರಿ ನೆನಪು ಇರುವುದು. ಕಾರ್ಯ ವ್ಯವಹಾರವೂ ಯಜ್ಞದ ವ್ಯವಹಾರವಾಗಿದೆಯಲ್ಲವೇ? ಯಜ್ಞಪಿತನಿಂದಲೇ ಯಜ್ಞದ ರಚನೆಯಾಗಿದೆ. "ಯಜ್ಞಕಾರ್ಯ" ಎನ್ನುವುದರಿಂದಲೇ ತಂದೆಯ ನೆನಪು ಬಂದಿತಲ್ಲವೇ? ಯಾವುದೇ ಕಾರ್ಯ ವ್ಯವಹಾರವನ್ನು ಮಾಡುವಾಗ ಈಶ್ವರೀಯ ಸೇವೆಗಾಗಿ ಅಥವಾ ಯಜ್ಞಕಾರ್ಯಕ್ಕಾಗಿ ಇರುವೆನು ಎಂದು ತಿಳಿಯಿರಿ. ಒಂದಾಗಿದೆ ಪ್ರತ್ಯಕ್ಷ ವಿಕರ್ಮ ವಿನಾಶದ ಸ್ಥಿತಿಯಲ್ಲಿ ಸ್ಥಿತರಾಗಿ ಪೂರ್ಣ ಬಲದಿಂದ ವಿಕರ್ಮಗಳನ್ನು ನಾಶ ಮಾಡುವುದು, ಎರಡನೆಯ ವಿಧಿಯಾಗಿದೆ ಎಷ್ಟೆಷ್ಟು ಶುದ್ಧ ಸಂಕಲ್ಪ ಅಥವಾ ಮನನ ಶಕ್ತಿಯಿಂದ ತಮ್ಮ ಬುದ್ಧಿಯನ್ನು ವ್ಯಸ್ತ ಮಾಡಿಕೊಂಡಾಗ ಆ ಶಕ್ತಿಗಳು ಜಮಾ ಆಗುತ್ತವೆ. ಆಗ ಅವುಗಳಿಂದ ನಿಧಾನವಾಗಿ ನಾಶವಾಗುವುದು. ಬುದ್ಧಿಯಲ್ಲಿ ಇದನ್ನು ತುಂಬುವುದರಿಂದ ಮೊದಲಿನದು ತಾನೇ ಹೋಗುವುದು. ಒಂದಾಗಿದೆ ಮೊದಲು ಹಳೆಯದನ್ನು ಪೂರ್ಣ ತೆಗೆದು ಹಾಕಿ ಮತ್ತೆ ತುಂಬುವುದು, ಎರಡನೆಯದಾಗಿದೆ ತುಂಬುತ್ತಾ ಹಳೆಯದನ್ನು ತೆಗೆಯುವುದು. ಖಾಲಿ ಮಾಡುವ ಸಾಹಸವಿಲ್ಲದಿದ್ದರೆ ಬೇರೆಯದನ್ನು ತುಂಬುತ್ತಾ ಹೋದಂತೆ ಮೊದಲಿನದು ತಾನೇ ನಷ್ಟವಾಗುವುದು. ಆ ಸ್ಥಿತಿ ತಾನೇ ಆಗುವುದು. ಒಂದು ಕಡೆಗೆ ತುಂಬುತ್ತಾ ಹೋಗುವುದು ಮತ್ತು ಇನ್ನೊಂದು ಕಡೆಗೆ ಖಾಲಿಯಾಗುತ್ತ ಹೋಗುವುದು. ಆಮೇಲೆ ಯಾವ ಸ್ಥಿತಿಯನ್ನು ಬಯಸುತ್ತೀರೋ ಅದು ಸಹಜವಾಗುವುದು. ಯಾವಾಗ ಬೇಕೋ ಆಗ ಆಗುವುದು. ಪೂರ್ಣ ಬಲದಿಂದ ಖಾಲಿ ಮಾಡುವ ಸ್ಥಿತಿಯಿಲ್ಲದಿದ್ದರೆ ಎರಡನೆಯ ವಿಧಿಯಿದೆಯಲ್ಲವೇ? ತುಂಬುತ್ತಾ ಹೋಗಿ ಅದು ಸ್ವತಃ ಖಾಲಿಯಾಗುತ್ತಾ ಹೋಗುವುದು. ಈಗ ಏರುವ ಕಲೆಯೆಂಬುದು ಸ್ಮರಣೆಯಲ್ಲಿರಲಿ. ಎಲ್ಲಾ ದಾರಿಗಳು ಮುಚ್ಚಿದಾಗ ಬುದ್ಧಿ ಎಲ್ಲಿಗೂ ಹೋಗುವುದಿಲ್ಲ. ಯಜ್ಞ ವ್ಯವಹಾರ ಅಥವಾ ಕರ್ಮಣಾ ಸೇವೆಯ ಅಂಕಗಳು ಇವೆಯಲ್ಲವೇ? ಆದರೂ

"ಗೌರವಯುತ ತೇರ್ಗಡೆ" (ಪಾಸ್ ವಿತ್ ಆನರ್)ಗೆ ಆ 100 ಅಂಕಗಳು ಸಹಾಯ ಮಾಡುವವು. ವ್ಯವಹಾರವನ್ನು ಮಾಡುವಾಗ ಅಥವಾ ವಾಚಾ ಸೇವೆಯನ್ನು ಮಾಡುವಾಗ ಇದು ಈಶ್ವರೀಯ ಸೇವೆಯಾಗಿದೆ. ಯಜ್ಞಕಾರ್ಯವಾಗಿದೆ ಎಂಬ ಗುರಿಯನ್ನು ಇಟ್ಟುಕೊಳ್ಳುವುದು ಅವಶ್ಯಕವಾಗಿದೆ. ಆಗ ಸಹಜವಾಗಿ ಯಜ್ಞರಚಯಿತನ ನೆನಪು ಬರುವುದು ಮತ್ತು ಯಾವುದೇ ಕಾರ್ಯವನ್ನು ಮಾಡುವಾಗ ಈ ಕಾರ್ಯಕ್ಕೆ ನಿಮಿತ್ತ ಮಾಡುವ ಬೆನ್ನೆಲುಬು ಯಾರಾಗಿದ್ದಾರೆ ಎಂದು ತಿಳಿದುಕೊಳ್ಳಿ. ಈಗ ನಾನು ನಿಮಿತ್ತನಾಗಿದ್ದೇನೆ ಆದರೆ ಬೆನ್ನೆಲುಬು ಯಾರಾಗಿದ್ದಾರೆ? ಬೆನ್ನೆಲುಬು ಇಲ್ಲದೇ ಶರೀರ ಹೇಗೆ ನಿಲ್ಲುವುದು? ಬೆನ್ನೆಲುಬು ಇಲ್ಲದೆಯೇ ತಾವು ಯಾವುದೇ ಕರ್ಮದಲ್ಲಿ ಸಫಲತೆ ಪಡೆಯಲು ಸಾಧ್ಯವೇ ಇಲ್ಲ. ಯಾವುದೇ ಕಾರ್ಯವನ್ನು ಮಾಡುವಾಗ ನಾನು ಕೇವಲ ನಿಮಿತ್ತನಾಗಿದ್ದೇನೆ. ಮಾಡಿಸುವಂತಹವನು ಯಾರು ಎಂದು ಯೋಚಿಸಿ? "ಮಾಡಿ-ಮಾಡಿಸುವಂತಹವನು" (ಕರನ್-ಕರಾವನ್ ಹಾರ್) ಎಂದು ಭಕ್ತಿಮಾರ್ಗದಲ್ಲಿ ಶಬ್ದ ಉಚ್ಚಾರಣೆ ಮಾಡುತ್ತಿದ್ದಿರಿ. ಆದರೆ ಅಲ್ಲಿ ಬೇರೆ ಅರ್ಥದಿಂದ ಹೇಳುತ್ತಿದ್ದಿರಿ. ಆದರೆ ಈ ಸಮಯ ಯಾವುದೇ ಕರ್ಮ ಮಾಡುವಾಗ ಕರನ್- ಕರಾವನ್ ಹಾರನಿದ್ದಾನಲ್ಲವೇ? ಮಾಡಿಸುವಂತಹವನು ತಂದೆ, ಮಾಡುವವನು ನಿಮಿತ್ತ ಈ ಸ್ಥಿತಿಯಲ್ಲಿದ್ದು ಕರ್ಮ ಮಾಡಿದರೆ ಸಹಜ ಸ್ಮೃತಿಯಾಗಲಿಲ್ಲವೇ? ನಿರಂತರ ಯೋಗಿಯಾಗಲಿಲ್ಲವೇ? ರಂಗಮಂಚದ ಮೇಲೆ ಪಾತ್ರಧಾರಿ ಲೋಕಕಲ್ಯಾಣಕ್ಕಾಗಿ ನಗಿಸುವ ಪಾತ್ರ ಮಾಡಿ ಮತ್ತೆ ಇನ್ನೊಂದು ಪಾತ್ರ ಅಭಿನಯ ಮಾಡುವಂತೆ ತನ್ನ ಮೂಲ ಸ್ಥಿತಿಯಿಂದ ಕೆಳಗಿಳಿದರೂ ಅದರಲ್ಲಿ ಆಟದ ರೀತಿ ಅನುಭವ ಮಾಡುವರು. ಸಾಕ್ಷಿಯಾಗಿ ಪಾತ್ರ ಅಭಿನಯ ಮಾಡುವಾಗ ಸಹಜ ಯೋಗಿಯಾದಿರಲ್ಲವೇ? ನೆನಪನ್ನು ಸಹಜ ಮಾಡಿಕೊಳ್ಳಿ. ಈ ನೆನಪಿನ ಕೋರ್ಸ್ ಸಹಜವಾದರೆ ಯಾರಿಗಾದರೂ ಕೋರ್ಸ್ ಕೊಡುವಾಗ ಬಲವನ್ನು ತುಂಬಬಹುದು. ಕೇವಲ ಕೋರ್ಸ್ ಕೊಡುವುದರಿಂದ ಪ್ರಜೆಗಳಾಗುತ್ತಾರೆ. ಆದರೆ ಕೋರ್ಸನಲ್ಲಿ ಫೋರ್ಸ್(ಶಕ್ತಿ) ಇದ್ದರೆ ಸಮೀಪ ಸಂಬಂಧದಲ್ಲಿ ಬರುತ್ತಾರೆ. ಅತೀತ ಮತ್ತು ಪ್ರಿಯರಾಗಿರುವಂತೆ ಅನುಭವ ಮಾಡುವರು, ಹಾಗಾದರೆ ಎಲ್ಲರೂ ಸಹಜ ಯೋಗಿಗಳಾಗಿರುವಿರಲ್ಲವೇ? ಹಠ ಮಾಡಬೇಡಿ. 63 ಜನ್ಮ ಕಷ್ಟವನ್ನು ನೋಡುತ್ತಾ ಈ ಒಂದು ಜನ್ಮ ಸಹಜ ಪುರುಷಾರ್ಥದಲ್ಲಿಯೂ ಕಷ್ಟಗಳಲ್ಲಿಯೇ ಇದ್ದರೆ ಸಹಜ ಮತ್ತು ಸ್ವತಃದ ಅನುಭವ ಯಾವಾಗ ಮಾಡುವಿರಿ? ಇದನ್ನು ಸಹಜ ಯೋಗವೆಂದು ಹೇಳುತ್ತೀರಲ್ಲವೇ? ಕಠಿಣ ಯೋಗವಲ್ಲ ತಾನೆ? ಇಲ್ಲಿಯ ಸಹಜ ಯೋಗ ಅಲ್ಲಿ ಸಹಜ ರಾಜ್ಯ ಮಾಡಿಸುವುದು. ಅಲ್ಲಿಯೂ ಯಾವ ಕಷ್ಟವಿರುವುದಿಲ್ಲ. ಇಲ್ಲಿಯ ಸಂಸ್ಕಾರಗಳನ್ನೇ ಅಲ್ಲಿ ತೆಗೆದುಕೊಂಡು ಹೋಗುವಿರಿ. ಕೊನೆಯವರೆಗೂ ಕಷ್ಟದ ಸಂಸ್ಕಾರಗಳಿದ್ದರೆ ಅಲ್ಲಿ ಸಹಜ ರಾಜ್ಯ ಹೇಗೆ ಮಾಡುವಿರಿ. ಒಂದುವೇಳೆ ದೇವತೆಗಳ ಚಿತ್ರಗಳನ್ನೂ ಮಾಡುತ್ತೀರಿ. ಅವರ ಮುಖದಲ್ಲಿ ಸರಳತೆಯನ್ನು ಅವಶ್ಯ ತೋರಿಸುತ್ತೀರಿ. ಈ ವಿಶೇಷ ಗುಣವನ್ನು ತೋರಿಸುತ್ತೀರಿ. ಲಕ್ಷಣಗಳಲ್ಲಿ ಸರಳತೆ, ಅದಕ್ಕೆ ತಾವು ಮುಗ್ಧತೆ ಎಂದು ಹೇಳುತ್ತೀರಿ. ಯಾರು ಎಷ್ಟು ಸಹಜ ಪುರುಷಾರ್ಥಿಯೋ ಅಷ್ಟು ಮಾನಸಿಕವಾಗಿ ಸರಳ, ಮಾತಿನಲ್ಲಿ ಸರಳ, ಕರ್ಮದಲ್ಲಿ ಸರಳವಾಗಿರುವನು. ಇಂತಹವರಿಗೆ ಫರಿಶ್ತೆ ಎಂದು ಹೇಳುವರು. ಒಳ್ಳೆಯದು.

ಅವ್ಯಕ್ತ ಮುರಳಿ 04-07-1971.

***ಸ್ಮೃತಿಯ ಸಹಜ ವಿಧಿ***

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ದಿನವಿಡೀ ಯಾವ ಕರ್ಮವನ್ನು ಮಾಡುತ್ತಿದ್ದರೂ ಅವ್ಯಕ್ತ ಸ್ಥಿತಿಯಲ್ಲಿ ಇದ್ದು, ಸದಾ ತಂದೆಯನ್ನು ಜೊತೆಗಾರನನ್ನಾಗಿ ಮಾಡಿಕೊಂಡು ಡಬಲ್ ಶಕ್ತಿಯೊಂದಿಗೆ ಕಾರ್ಯವನ್ನು ಮಾಡುತ್ತಾ, ಸ್ಮೃತಿಯನ್ನು ಸಹಜವಾಗಿಸಿಕೊಂಡಿದ್ದೇನೆ.

2. ನನ್ನ ಪ್ರತಿ ಸಂಕಲ್ಪ, ಪ್ರತಿ ಹೆಜ್ಜೆ, ಸತ್ಯದ(ತಂದೆಯ) ಸಾಂಗತ್ಯದೊಂದಿಗೆ ಇರುವ ನಿರಂತರ ಸತ್ಸಂಗಿ.

3. ನಾನು ಒಬ್ಬನೊಂದಿಗೆ ಸರ್ವ ಸಂಬಂಧಗಳನ್ನು ಜೋಡಿಸಿರುವ ಫರಿಶ್ತಾ.

4. ನಾನು ಬಾಪ್ ದಾದಾ ಮತ್ತು ವಾರಸತ್ವವನ್ನು (ಚಿತ್ರ) ಎದುರಿಗೆ ಇಟ್ಟುಕೊಂಡು ಬುದ್ಧಿಯ ಎಲ್ಲಾ ಮಾರ್ಗಗಳನ್ನು ಮುಚ್ಚಿ ಸ್ಮೃತಿಯನ್ನು ಸಹಜ ಮತ್ತು ಸ್ವತಹವಾಗಿಸಿಕೊಂಡಿದ್ದೇನೆ.

5. ನಾನು ತಂದೆಯ, ತಂದೆಯ ಕರ್ತವ್ಯದ, ತಂದೆಯ ಗುಣಗಳ ಸ್ಮೃತಿಯ ಫೋರ್ಸ್ ನೊಂದಿಗೆ ಸ್ಮೃತಿಯನ್ನು ಸಹಜವಾಗಿ ಮಾಡಿಕೊಂಡಿದ್ದೇನೆ.

6. ನಾನು ಪ್ರತಿ ಕರ್ಮದಲ್ಲಿ ಬಾಪ್ ದಾದಾರವರನ್ನು ಜೊತೆ ಇಟ್ಟುಕೊಂಡು, ನನ್ನ ಅಲೌಕಿಕ ಜೀವನದ ಕೈಯನ್ನು ತಂದೆಯ ಕೈಯಲ್ಲಿಟ್ಟು, ಜವಾಬ್ದಾರಿಯನ್ನು ತಂದೆಗೆ ಕೊಟ್ಟು ಸ್ವಯಂ ಅನ್ನು ಹಗುರವಾಗಿ ಮಾಡಿಕೊಂಡಿರುವ ನಿಶ್ಚಿಂತ ಚಕ್ರವರ್ತಿ ಆಗಿದ್ದೇನೆ.

7. ನಾನು ಇಡೀ ದಿನದ ದಿನಚರಿಯಲ್ಲಿ ಯಾವ ಕಾರ್ಯ ವ್ಯವಹಾರವನ್ನು ಮಾಡಿದರೂ ಈಶ್ವರೀಯ ಕಾರ್ಯಕ್ಕಾಗಿ, ಯಜ್ಞ ಕಾರ್ಯ ವ್ಯವಹಾರದಲ್ಲಿ ಇದ್ದೇನೆ ಎಂದು ಭಾವಿಸಿ ವಿಕರ್ಮಗಳನ್ನು ವಿನಾಶ ಮಾಡಿಕೊಂಡಿದ್ದೇನೆ.

8. ನಾನು ಶುದ್ಧ ಸಂಕಲ್ಪಗಳು, ಮನನ ಶಕ್ತಿಯೊಂದಿಗೆ ಬುದ್ಧಿಯನ್ನು ವ್ಯಸ್ತವಾಗಿಟ್ಟುಕೊಂಡು ಶಕ್ತಿಯನ್ನು ಜಮಾ ಮಾಡಿಕೊಂಡಿದ್ದೇನೆ.

9. ನಾನು ದಿನವಿಡೀ ಕಾರ್ಯ ವ್ಯವಹಾರದಲ್ಲಿ ಅಥವಾ ಕರ್ಮಣಾ ಸೇವೆಯಲ್ಲಿ ಅಂಕಗಳನ್ನು ಪಡೆದಿರುವ ಪಾಸ್ ವಿತ್ ಆನರ್ ಸ್ವರೂಪ.

10. ಯಾವ ಕಾರ್ಯ ಮಾಡುತ್ತಿದ್ದರೂ 'ನಾನು ನಿಮಿತ್ತ, ಮಾಡಿ ಮಾಡಿಸುವವರು ತಂದೆ' ಎಂಬ ಸಹಜ ಸ್ಮೃತಿಯೊಂದಿಗೆ ಸಫಲತೆಯನ್ನು ಪಡೆದಿದ್ದೇನೆ.

11. ನಾನು ಸಾಕ್ಷಿಯಾಗಿ ಪಾತ್ರವನ್ನು ಅಭಿನಯಿಸುತ್ತಿರುವ ಸಹಜ ಯೋಗಿ.

12. ನಾನು ಕೋರ್ಸ್ ನೊಂದಿಗೆ ಫೋರ್ಸನ್ನು (ಶಕ್ತಿ) ತುಂಬಿ ಎಲ್ಲರನ್ನೂ ತಂದೆಗೆ ಸಮೀಪ ಸಂಬಂಧದಲ್ಲಿ ತಂದಿರುವ ಸಹಜಯೋಗಿ.

13. ನಾನು ಇಲ್ಲಿ ಸಹಜ ಯೋಗಿಯಾಗಿ ಭವಿಷ್ಯತ್ತಿನಲ್ಲಿ ಸಹಜ ರಾಜ್ಯ ಸಿಂಹಾಸನವನ್ನು ಪಡೆದಿದ್ದೇನೆ.

14. ನಾನು ಮನಸ್ಸಿನಲ್ಲಿ, ವಾಚಾದಲ್ಲಿ, ಕರ್ಮದಲ್ಲಿ ಸರಳವಾಗಿರುವ ಅವ್ಯಕ್ತ ಫರಿಶ್ತಾ.